345 (672) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):– ಪ್ರವಾಸೋದ್ಯಮ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಸೋದ್ಯಮ ಇಲಾಖೆ ಯಾವುದಾದರೂ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಂಡಿದೆಯೇ;

ಆ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಶ್ರೀ ಜನಾರ್ದನರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು):–

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕೈಗೊಳ್ಳಲಾಗಿರುವ ಪ್ರವಾಸಿ ಅಭಿವೃದ್ಧಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ:

1. ತೀರ್ಥಹಳ್ಳಿ ತಾಲ್ಲೂಕಿನ ಅಂಬುತೀರ್ಥ ಪ್ರದೇಶದಲ್ಲಿ ಪ್ರವಾಸಿಗರಿಗಾಗಿ ರೂ. 50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯಾತ್ರಿನಿವಾಸವನ್ನು ನಿರ್ಮಿಸಲಾಗುತ್ತಿದೆ.

2. ಕುಪ್ಪಳ್ಳಿ ಕುವೆಂಪು ಪ್ರತಿಷ್ಠಾನದ ಬಳಿ ರೂ. 50.00 ಲಕ್ಷಗಳ ವೆಚ್ಚದಲ್ಲಿ ಯಾತ್ರಿನಿವಾಸವನ್ನು ನಿರ್ಮಿಸಲಾಗುತ್ತಿದೆ.

3. ಆಗುಂಬೆಯಲ್ಲಿ ರಸ್ತೆಬದಿ ಸೌಲಭ್ಯವನ್ನು ನಿರ್ಮಿಸಲಾಗಿದ್ದು, ಪ್ರಸ್ತುತ ಈ ಕಟ್ಟಡವು ಪೋಲೀಸ್ ಇಲಾಖೆಯ ನಕ್ಸಲ್ ನಿಗ್ರಹ ದಳದ ಉಪಯೋಗದಲ್ಲಿದೆ.

ಆ) ಹೌದು.

SUDA ದಿಂದ ಅನುಮತಿ ಪಡೆಯದೇ ಬಡಾವಣೆ ನಿರ್ಮಾಣ

349 (421) ಶ್ರೀ ಕುಮಾರಸ್ವಾಮಿ (ಶಿವಮೊಗ್ಗ ಗ್ರಾಮಾಂತರ):– ನಗರಾಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಶಿವಮೊಗ್ಗ ನಗರದ ಹೊರವಲಯದ ಊರಗಡೂರು ಗ್ರಾಮದ ಜಮೀನುಗಳಲ್ಲಿ ಸಹಾರ ಇಂಡಿಯಾ ಲಿ. ಸಂಸ್ಥೆ ಲೇಔಟ್ ಮಾಡಲು ನಗರಾಭಿವೃದ್ಧಿ ಇಲಾಖಾ ಮುಖಾಂತರ ವಲಯ ಬದಲಾವಣೆ ಅನುಮತಿ ಪಡೆಯಲಾಗಿದೆಯೇ;

ಆ) ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕರದಿಂದ ಕ್ರಮಬದ್ಧವಾಗಿ ನಿವೇಶನ ಹಂಚಿಕೆ ಮಾಡಲು ಅನುಮತಿ ಪಡೆಯದೇ ಸಾರ್ವಜನಿಕರಿಂದ ನಿವೇಶನಕ್ಕಾಗಿ/ ಕಟ್ಟಡಕ್ಕಾಗಿ ಹಣ ಸಂಗ್ರಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಲೇಔಟ್ ನಿರ್ಮಾಣದಲ್ಲಿ ಕಂದಾಯ ನಿಯಮಗಳು ಉಲ್ಲಂಘನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ ಸಚಿವರು) :–

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಈ) ಅನ್ವಯಿಸುವುದಿಲ್ಲ.

ಸರ್ಕಾರದ ವಸತಿ ಯೋಜನೆಗಳಡಿ ಫಲಾನುಭವಿಗಳ ನಿವೇಶನ

352 (424) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ):– ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜೀವ್ ಗಾಂಧಿ ವಸತಿ ನಿಗಮದಿಂದ ವಿತರಿಸ ಲಾಗುವ ಮನೆ ಪಡೆದ ಫಲಾನುಭವಿಗಳು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವೇ;

ಆ) ಅದೇ ರೀತಿ ಆಶ್ರಯ ಅಂಬೇಡ್ಕರ್, ಇಂದಿರಾ ಆವಾಜ್ ಮನೆಗಳಿಗೆ ಒದಗಿಸಬೇಕಾದ ದಾಖಲೆ ಗಳು ಯಾವುವು;

ಇ) ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಈ ಎಲ್ಲಾ ದಾಖಲೆಗಳನ್ನು ಪಡೆದು ನೋಂದಣಿ ಮಾಡಲಾಗಿದೆಯೇ;

ಈ) ಶಿವಮೊಗ್ಗ ತಾಲ್ಲೂಕಿನಲ್ಲಿ ಕೇವಲ ಫಾರಂ 12 ತೆಗೆದುಕೊಂಡು ನೋಂದಣಿ ಮಾಡಿರುವ ಪ್ರಕರಣಗಳೆಷ್ಟು? (ಪೂರ್ಣ ವಿವರ ಒದಗಿಸುವರೆ);

ಉ) ಈ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ನಿವೇಶನ ಹಕ್ಕು ಪತ್ರ ಕಡ್ಡಾಯವೇ;

ಊ) ನಿವೇಶನ ಇಲ್ಲದವರಿಗೂ ಈ ಯೋಜನೆ ಅನ್ವಯವಾಗುವುದೇ?